# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-3

ಸಂಖ್ಯೆ:ವಿ1/ವಿಸಪ/ಪ.ಕಾ/72/2019 ದಿನಾಂಕ:22-02-2019

## ಅ ಧಿ ಸೂ ಚ ನೆ

ವಿಷಯ: 2019 ನೇ ಮೇ ಮಾಹೆಯಲ್ಲಿ ನಡೆಯಲಿರುವ ವಿಶೇಷ ಸಂಗೀತ/ನೃತ್ಯ ಮತ್ತು ತಾಳವಾದ್ಯ ಪರೀಕ್ಷೆಗಳಿಗೆ ಅಭ್ಯರ್ಥಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿಗಳನ್ನುಆಹ್ವಾನಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಅದೇಶ ಸಂಖ್ಯೆ:ಇಡಿ-30ಎಸ್.ಎಲ್.ಬಿ.2011 ದಿನಾಂಕ:01.10.2012
2) ಸರ್ಕಾರಿ ಅದೇಶ ಸಂಖ್ಯೆ:ಇಡಿ-32ಎಸ್.ಎಲ್.ಬಿ.2013 ದಿನಾಂಕ:25.03.2013
3) ಸರ್ಕಾರಿ ಅದೇಶ ಸಂಖ್ಯೆ:ಇಡಿ-299 ಎಸ್.ಎಲ್.ಬಿ.2011, ದಿನಾಂಕ:08.07.2013.
4) ಸರ್ಕಾರದ ಆದೇಶ ಸಂಖ್ಯೆ: ಇಡಿ 299 ಎಸ್.ಎಲ್.ಬಿ 2011(ಭಾಗ).ದಿನಾಂಕ:07.05.2015
5) ಆಯುಕ್ತರು, ಸಾ.ಶಿ.ಇಲಾಖೆ ಮತ್ತು ಅಧ್ಯಕ್ಷರು, ಕ.ಪ್ರೌ.ಶಿ.ಪ.ಮಂಡಳಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:02.01.2019 ರಂದು ನಡೆದ ಸಭಾ ನಡಾವಳಿ.

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿ ನೋಂದಾಯಿಸಲ್ಪಟ್ಟು, ಸಂಕೇತ ಸಂಖ್ಯೆ ಹೊಂದಿರುವ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಶಿಕ್ಷಕರಿಂದ (ಶಾಲೆಗಳಿಂದ) ತಾವು ಬೋಧಿಸುತ್ತಿರುವ ಅಭ್ಯರ್ಥಿಗಳಿಗೆ ಹಾಗೂ ಖಾಸಗಿ ಅಭ್ಯರ್ಥಿಗಳಿಂದ ಮಂಡಳಿಯು ನಿಗದಿಪಡಿಸಿದ ಪರೀಕ್ಷಾ ಕೇಂದ್ರಗಳ ಮೂಲಕ ಮೇ 2019ನೇ ಸಾಲಿನಲ್ಲಿ ನಡೆಸಲಿರುವ ಶಾಸ್ತ್ರೀಯ ಸಂಗೀತ (ಕರ್ನಾಟಕ/ಹಿಂದೂಸ್ತಾನಿ) ಭರತನಾಟ್ಯ/ಕೂಚುಪುಡಿ/ಕಥಕ್ ಮತ್ತು ತಾಳವಾದ್ಯ (ಕರ್ನಾಟಕ/ಹಿಂದೂಸ್ತಾನಿ) ಪರೀಕ್ಷೆಗಳಿಗೆ ಅಭ್ಯರ್ಥಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪರೀಕ್ಷೆಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ, ನಿಗಧಿತ ಪರೀಕ್ಷಾ ಶುಲ್ಕ ಮುಂತಾದ ವಿವರಗಳನ್ನು ಈ ಅಧಿಸೂಚನೆಯಲ್ಲಿ ಕೆಳಗೆ ನೀಡಲಾದ ನಿಯಮಗಳನ್ವಯ ಕ್ರಮಕೈಗೊಳ್ಳಲು ಪರೀಕ್ಷಾ ಕೇಂದ್ರದ ಮುಖ್ಯಸ್ಥರುಗಳಿಗೆ ತಿಳಿಸಲಾಗಿದೆ.

1. ಮೇ 2019ರಲ್ಲಿ ಕಿರಿಯ ದರ್ಜೆ, ಹಿರಿಯ ದರ್ಜೆ, ವಿದ್ವತ್ ಪೂರ್ವ ಮತ್ತು ವಿದ್ವತ್ ಅಂತಿಮ ಸಂಗೀತ, ನೃತ್ಯ ಮತ್ತು ತಾಳವಾದ್ಯ ಪರೀಕ್ಷೆಗಳನ್ನು ನಡೆಸಲಾಗುವುದು. ಉಲ್ಲೇಖ(1)ರ ಸರ್ಕಾರದ ಆದೇಶದಂತೆ ಈ ಹಿಂದೆ 2018ರ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು ಮತ್ತೆ ಪರೀಕ್ಷೆ ಬರೆಯಲು ಇಚ್ಛಿಸಿದಲ್ಲಿ ಮೇ 2019 ರಲ್ಲಿ ನಡೆಯಲಿರುವ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಯಾವುದೇ ಲಿಖಿತ ಪತ್ರಿಕೆಗಳಾದ ಶಾಸ್ತ್ರ ಪತ್ರಿಕೆ(ಥಿಯರಿ) ಮತ್ತು ಶ್ರವಣ/ದೃಶ್ಯ ಜ್ಞಾನ ಪತ್ರಿಕೆ ಬರೆಯಲು ಅವಕಾಶ ಕಲ್ಪಿಸಲಾಗಿದೆ. ಹಾಗೂ ಯಾವುದಾದರೂ ಒಂದು ಪ್ರಾಯೋಗಿಕ ಪತ್ರಿಕೆಯಲ್ಲಿ ಅನುತ್ತೀರ್ಣರಾಗಿದ್ದರೂ ಸಹ ಎಲ್ಲಾ ಪ್ರಾಯೋಗಿಕ ಪತ್ರಿಕೆಗಳಿಗೆ ಪರೀಕ್ಷೆ ತೆಗೆದುಕೊಳ್ಳಬೇಕಾಗುತ್ತದೆ. **ಈ ಸೌಲಭ್ಯ 2012 ನೇ ಸಾಲಿನಿಂದ ಅನುತ್ತೀರ್ಣರಾದ ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ. ಅದಕ್ಕೂ ಹಿಂದೆ ಅನುತ್ತೀರ್ಣರಾದ ಅಭ್ಯರ್ಥಿಗಳು ಒಂದು ವಿಷಯದಲ್ಲಿ ಅನುತ್ತೀರ್ಣರಾಗಿದ್ದರೂ ಎಲ್ಲಾ ವಿಷಯಗಳಿಗೂ ಪರೀಕ್ಷೆ ತೆಗೆದುಕೊಳ್ಳಬೇಕಾಗಿದ್ದು ಪರೀಕ್ಷಾ ಅರ್ಜಿ ಸಲ್ಲಿಸಬೇಕು.**

2012 ನೇ ಸಾಲಿನಿಂದ ಇಲ್ಲಿಯವರೆಗೆ ಅನುತ್ತೀರ್ಣರಾದ ಎಲ್ಲಾ ಅಭ್ಯರ್ಥಿಗಳಿಗೆ **MSA** ಯನ್ನು(**MSA - MARKS STATEMENT-CUM-APPLICATION**) ಪರೀಕ್ಷಾ ಕೇಂದ್ರಗಳಿಗೆ ಕಳುಹಿಸಲಾಗಿದೆ. **MSA** ಯ ಪುಟ 1 ರಲ್ಲಿ ಅಭ್ಯರ್ಥಿಯ ವಿವರ ಹಾಗೂ ಗಳಿಸಿದ ಅಂಕಗಳ ವಿವರ ಇರುತ್ತದೆ. ಪುಟ 2 ರಲ್ಲಿ ಅಭ್ಯರ್ಥಿಯು ತಾವು ಅನುತ್ತೀರ್ಣರಾದ ವಿಷಯಗಳಿಗೆ ನಿಗದಿತ ಕಾಲಂನಲ್ಲಿ ಅನುತ್ತೀರ್ಣ ಅಂಕಗಳನ್ನು ಭರ್ತಿ ಮಾಡುವುದು. ಹಾಗೂ ನಿಗದಿತ ಸ್ಥಳದಲ್ಲಿ ಫೋಟೋ ಅಂಟಿಸುವುದು. ಈ ವರ್ಷ ಪಾಠ ಹೇಳಿಕೊಟ್ಟಿರುವ ಶಿಕ್ಷಕರು **MSA** ಯಲ್ಲಿ ಅಗತ್ಯವಾದ ವಿವರಗಳನ್ನು ಮಾತ್ರ ಭರ್ತಿ ಮಾಡಿ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ನೀಡುವುದು. **MSA ಯಲ್ಲಿ ಶಿಕ್ಷಕರು ತಮ್ಮ ಸಹಿ/ಸೀಲನ್ನು ಹಾಕಬಾರದು. MSA ಪರೀಶೀಲಿಸಿ ಸಹಿ ಮಾಡುವ ಕಾರ್ಯವನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ವಹಿಸಲಾಗಿದೆ.** ಪರೀಕ್ಷಾ ಕೇಂದ್ರದ ಮುಖ್ಯಸ್ಥರು **MSA** ಯನ್ನು ಪರಿಶೀಲಿಸಿ, ಪ್ರಮಾಣ ಪತ್ರವನ್ನು ಭರ್ತಿಮಾಡಿ ಸಹಿಮಾಡುವುದು. ಇದರೊಂದಿಗೆ ಅನುತ್ತೀರ್ಣ ಅಂಕಪಟ್ಟಿಯ ಜೆರಾಕ್ಸ್ ಮತ್ತು ಅಭ್ಯರ್ಥಿಯ ವಿವರಗಳನ್ನು ಪ್ರತ್ಯೇಕ ನಾಮಪಟ್ಟಿಯಲ್ಲಿ ಬರೆದು ಒಂದು ಪ್ರತ್ಯೇಕ ಕವರ್‌ನಲ್ಲಿ ಸಲ್ಲಿಸಬೇಕು. ಪರೀಕ್ಷಾ ಕೇಂದ್ರದವರು ಎಲ್ಲಾ ಅನುತ್ತೀರ್ಣ ಅಭ್ಯರ್ಥಿಗಳ ದಾಖಲೆಗಳನ್ನು ಒಟ್ಟಿಗೆ ಒಂದು ಕವರ್‌ನಲ್ಲಿ ಹಾಕಿ ಮಂಡಳಿಗೆ ಸಲ್ಲಿಸುವುದು. ಇವರು ಈ ಬಾರಿ ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. (ಅನುತ್ತೀರ್ಣ ಅಭ್ಯರ್ಥಿಗಳು ಈ ಹಿಂದೆ ಪರೀಕ್ಷೆ ಬರೆದ ಕೇಂದ್ರದಲ್ಲಿಯೇ ಈ ಬಾರಿಯೂ ಅರ್ಜಿ ಸಲ್ಲಿಸುವುದು.)

2. ಸಂಗೀತ ಶಾಲಾ ಶಿಕ್ಷಕರು ಪರೀಕ್ಷೆಗೆ ಹಾಜರುಪಡಿಸುವ ಅಭ್ಯರ್ಥಿಗಳು ಸ್ಥಳೀಯವಾಗಿ ವಾಸವಾಗಿರುವ ಬಗ್ಗೆ ಆಧಾರ್ ಕಾರ್ಡ್/ರೇಷನ್ ಕಾರ್ಡ್/ವ್ಯಾಸಂಗ ಮಾಡುತ್ತಿರುವ ಶಾಲೆಯಿಂದ ಶಾಲಾ ಮುಖ್ಯಸ್ಥರು ನೀಡಿರುವ ವ್ಯಾಸಂಗ ಪ್ರಮಾಣ ಪತ್ರ ಇದರಲ್ಲಿ ಯಾವುದಾದರೂ ಒಂದು ಗುರುತಿನ ಪ್ರಮಾಣಪತ್ರವನ್ನು ವೆಬ್‌ಸೈಟ್‌ನಲ್ಲಿ ಮುದ್ರಿಸಿಕೊಂಡು ವಿವರಗಳನ್ನು

ಭರ್ತಿ ಮಾಡಿದ ಅರ್ಜಿಯೊಂದಿಗೆ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ನೀಡುವುದು. ಖಾಸಗಿ ಅಭ್ಯರ್ಥಿಗಳು ಸಹ ಮೇಲಿನ ಯಾವುದಾದರು ಒಂದು ಗುರುತಿನ ಚೀಟಿಯನ್ನು ಪತ್ರಾಂಕಿತ ಅಧಿಕಾರಿಯಿಂದ ದೃಢೀಕರಿಸಿ, **ವೆಬ್‌ಸೈಟ್‌ನಲ್ಲಿ ಮುದ್ರಿಸಿಕೊಂಡು ವಿವರಗಳನ್ನು ಭರ್ತಿ ಮಾಡಿದ ಅರ್ಜಿ** ಜೊತೆಯಲ್ಲಿ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ನೀಡಬೇಕು. (

3. ಪರೀಕ್ಷಾ ಕೇಂದ್ರ ನಿಗಧಿಗೆ ಸಾಕಷ್ಟು ಅಭ್ಯರ್ಥಿಗಳು ಇಲ್ಲದೇ ಇದ್ದರೆ ಅಥವಾ ಇನ್ಯಾವುದೇ ಕಾರಣಕ್ಕಾಗಲಿ, ರಾಜ್ಯದ ಯಾವ ಪರೀಕ್ಷಾ ಕೇಂದ್ರವನ್ನಾದರೂ ರದ್ದುಪಡಿಸಲು ಮಂಡಳಿಯು ಪೂರ್ಣ ಅಧಿಕಾರವನ್ನು ಹೊಂದಿದೆ. ಅಂತಹ ಕೇಂದ್ರಗಳಿಗೆ ನೊಂದಾಯಿಸಲ್ಪಡುವ ಅಭ್ಯರ್ಥಿಗಳನ್ನು ಹತ್ತಿರದ ಕೇಂದ್ರಗಳಿಗೆ ವರ್ಗಾಯಿಸಲಾಗುವುದು.

4. ಸಂಗೀತ ಶಾಲಾ/ಶಿಕ್ಷಕರು ತಾವು ಸ್ವತ: ಬೋಧಿಸಿರುವ ವಿದ್ಯಾರ್ಥಿಗಳನ್ನು ಮಾತ್ರ ಪರೀಕ್ಷೆಗೆ ಹಾಜರುಪಡಿಸುವುದು. ಬೇರೆ ಶಿಕ್ಷಕರ ವಿದ್ಯಾರ್ಥಿಗಳನ್ನು ತಮ್ಮ ಮೂಲಕ ಪರೀಕ್ಷೆಗೆ ಕಡ್ಡಾಯವಾಗಿ ಹಾಜರುಪಡಿಸಬಾರದಾಗಿ ತಿಳಿಸಿದೆ. **2018 ರಲ್ಲಿ ನಡೆದ ಪರೀಕ್ಷೆಯಂತೆ ಈ ಬಾರಿಯು ಖಾಸಗಿಯಾಗಿ ಪರೀಕ್ಷೆಗೆ ಕುಳಿತುಕೊಳ್ಳಲು ಇಚ್ಚಿಸುವ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರದ ಮೂಲಕ ಆನ್‌ಲೈನ್ ಅರ್ಜಿಯನ್ನು ಸಲ್ಲಿಸಬೇಕು.** ವೆಬ್‌ಸೈಟ್‌ನಲ್ಲಿ ಮುದ್ರಿಸಿಕೊಂಡ ಮಾದರಿ ಅರ್ಜಿಯನ್ನು ಭರ್ತಿಮಾಡಿ ವಿವರಗಳನ್ನು ಭರ್ತಿ ಮಾಡಿದ ಅರ್ಜಿಯೊಂದಿಗೆ ದಾಖಲೆಗಳನ್ನು **ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಚಲನ್ ಮೂಲಕ ಪರೀಕ್ಷಾ ಶುಲ್ಕದ ಹಣ ಪಾವತಿಸಿ ನಿಗದಿತ ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷಾ ಅರ್ಜಿಗಳೊಂದಿಗೆ ದಾಖಲೆಗಳನ್ನು ಸಲ್ಲಿಸಲು ಕೊನೆ ದಿನಾಂಕಗಳನ್ನು ಕೆಳಕಂಡಂತೆ ಗೊತ್ತುಪಡಿಸಿದೆ.**

| | |
|---|---|
| ಪರೀಕ್ಷಾ ಕೇಂದ್ರಗಳಲ್ಲಿ ಅರ್ಜಿ ವಿತರಣೆ ಪ್ರಾರಂಭದ ದಿನಾಂಕ: | **01.03.2019** |
| ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ | **15.03.2019** |
| ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳಿಂದ ದಂಡ ಶುಲ್ಕದೊಂದಿಗೆ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ | **20.03.2019** |
| ಪರೀಕ್ಷಾ ಕೇಂದ್ರದವರು ಶುಲ್ಕ ಪಾವತಿಸಿದ ಬಗ್ಗೆ ಮೂಲ ಬ್ಯಾಂಕ್ ಚಲನ್‌ಗಳು, ಎಂ.ಎಸ್.ಎ. ಗಳು ಮತ್ತು ಕಂಪ್ಯೂಟರಿನಲ್ಲಿ ಮುದ್ರಿಸಿಕೊಂಡ ವಿದ್ಯಾರ್ಥಿಗಳ ವಿವಿಧ ವಿವರಗಳ ನಮೂನೆಗಳನ್ನು ಮಂಡಳಿಗೆ ರವಾನಿಸುವ ಕೊನೆಯ ದಿನಾಂಕ | **23.03.2019** |

- ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕದ ನಂತರ ಬಂದ ಅಭ್ಯರ್ಥಿಗಳಿಗೆ ಒಂದು ದಿನಕ್ಕೆ, ಒಂದು ಅಭ್ಯರ್ಥಿಗೆ ರೂ **150** ರಂತೆ ದಂಡ ಶುಲ್ಕ ಲೆಕ್ಕಾಚಾರ ಮಾಡಿ ಪರೀಕ್ಷಾ ಶುಲ್ಕದೊಂದಿಗೆ ಪಾವತಿಸುವುದು.

ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಶಾಲಾ/ಕಾಲೇಜು ಕಛೇರಿ ಸಮಯದಲ್ಲಿ ಮಾತ್ರ ಸಂಪರ್ಕಿಸುವುದು. ನಿಗಧಿಪಡಿಸಿದ ದಿನಾಂಕದ ನಂತರ ಅರ್ಜಿಗಳನ್ನು ಸಲ್ಲಿಸಲು ಆನ್‌ಲೈನ್‌ನಲ್ಲಿ ಅವಕಾಶವಿರುವುದಿಲ್ಲ. ಸಂಗೀತ ಶಾಲಾ ಶಿಕ್ಷಕರು ವಿದ್ಯಾರ್ಥಿಗಳ ಅರ್ಜಿಗಳನ್ನು ನಿಗಧಿತ ದಿನಾಂಕಕ್ಕೆ ಮೊದಲೇ ಸಲ್ಲಿಸುವುದು ಸೂಕ್ತ.

**ನಿಗದಿತ ದಿನಾಂಕದೊಳಗೆ ಪರೀಕ್ಷಾ ಕೇಂದ್ರದವರು ಮಾಹಿತಿಯನ್ನು, ಎಲ್ಲಾ ದಾಖಲೆಗಳ ಸಮೇತ ಮಂಡಳಿಗೆ ಸಲ್ಲಿಸದಿದ್ದಲ್ಲಿ ಪ್ರತಿದಿನಕ್ಕೆ 100/- ರೂ ಗಳಂತೆ ದಂಡ ಪಾವತಿಸಬೇಕಾಗುತ್ತದೆ.**

5. ಖಾಸಗಿಯಾಗಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಮತ್ತು ಸಂಗೀತ ಶಿಕ್ಷಕರು ತಮ್ಮ ಮುಖಾಂತರ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಮಂಡಳಿಯ ವೆಬ್‌ಸೈಟ್‌ನಲ್ಲಿ ಮುದ್ರಿಸಿಕೊಂಡ ಮಾದರಿ ಅರ್ಜಿಯನ್ನು ಭರ್ತಿ ಮಾಡಿಕೊಂಡು ಸಂಬಂಧಿಸಿದ ದಾಖಲೆಗಳೊಂದಿಗೆ ನಿಗದಿತ ದಿನಾಂಕದ ಒಳಗೆ ತಪ್ಪದೇ **ಸಂಗೀತ, ನೃತ್ಯ ಹಾಗೂ ತಾಳವಾದ್ಯಕ್ಕೆ ನಿಗದಿಪಡಿಸಿದ ಕೇಂದ್ರಕ್ಕೆ** ತಲುಪಿಸಬೇಕು. ಪರೀಕ್ಷಾ ಕೇಂದ್ರದ ಮುಖ್ಯಸ್ಥರು ದಾಖಲೆಗಳನ್ನು ಪರಿಶೀಲಿಸಿ ಶುಲ್ಕ ಪಾವತಿಸಿಕೊಂಡು ಬರಲು ಚಲನ್‌ನ್ನು ಸಂಬಂಧಿಸಿದ ವಿದ್ಯಾರ್ಥಿಗೆ ನೀಡುವುದು. ವಿದ್ಯಾರ್ಥಿಯು ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಶುಲ್ಕ ಪಾವತಿಸಿಕೊಂಡು ಬಂದ ನಂತರ ಚಲನ್ ನಲ್ಲಿ UTR ನಂಬರ್, ಬ್ಯಾಂಕ್ ಮೊಹರು ಮತ್ತು ಶುಲ್ಕದ ಮೊತ್ತವನ್ನು ಖಾತರಿಪಡಿಸಿಕೊಂಡು, ಸಹಿ (15-20 KB) ಮತ್ತು ಭಾವಚಿತ್ರ (25-40 KB) ಅಂಧರ ಪ್ರಮಾಣ ಪತ್ರ(25-40 KB), ಬ್ಯಾಂಕ್ ಚಲನ್(25-40 KB) ಮತ್ತು ಸಂಬಂಧಿಸಿದ ಪ್ರಮಾಣಪತ್ರಗಳು (25-40 KB) ಈ ಪ್ರಮಾಣದಲ್ಲಿರುವಂತೆ ಸ್ಕ್ಯಾನ್ ಮಾಡಿಕೊಂಡು ಪೆನ್ ಡ್ರೈವ್ ಅಥವಾ ಅಡಕ ಮುದ್ರೆ (ಸಿ.ಡಿ)ಯಲ್ಲಿ ಶೇಖರಿಸಿಕೊಂಡು

ಬಂದಂಥಹ ವಿದ್ಯಾರ್ಥಿಗಳಿಂದ ಪಡೆದು ಅರ್ಜಿಯನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವುದು. ಅರ್ಜಿ ಸಲ್ಲಿಸಿದ ನಂತರ ಅರ್ಜಿಯ ಒಂದು ಪ್ರತಿಯನ್ನು ಮುದ್ರಿಸಿ ಸಂಬಂಧಿಸಿದ ವಿದ್ಯಾರ್ಥಿಗೆ ನೀಡುವುದು. ಮತ್ತೊಂದು ಪ್ರತಿಯನ್ನು ಪಡೆದು ಪರೀಕ್ಷಾ ಕೇಂದ್ರದಲ್ಲಿ ದಾಖಲೆಯಾಗಿ ಇಟ್ಟುಕೊಳ್ಳುವುದು.

<u>ಪರೀಕ್ಷಾ ಶುಲ್ಕದ ವಿವರ:-</u>

**2019ರಲ್ಲಿ ಪ್ರಥಮ ಬಾರಿಗೆ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳ ಶುಲ್ಕದ ವಿವರ**

| ಕ್ರಮ ಸಂಖ್ಯೆ | ಪರೀಕ್ಷೆಯ ಹೆಸರು | ಪರೀಕ್ಷಾ ಶುಲ್ಕ ರೂ. | ಫಲಿತಾಂಶ ತಿಳಿಸುವ/ ಲ್ಯಾಮಿನೇಷನ್ ಶುಲ್ಕ ರೂ. | ಒಟ್ಟು ಶುಲ್ಕ ರೂ. |
|---|---|---|---|---|
| 1 | ಕಿರಿಯ ದರ್ಜೆ (Junior ) | 1264=00 | 45-00 | 1309=00 |
| 2 | ಹಿರಿಯ ದರ್ಜೆ (Senior) | 1420=00 | 45-00 | 1465=00 |
| 3 | ವಿದ್ವತ್ ಪೂರ್ವ (Pre Vidwat) | 1575=00 | 45-00 | 1620=00 |
| 4 | ವಿದ್ವತ್ ದರ್ಜೆ ಅಂತಿಮ (Vidwat Final) | 1654=00 | 45-00 | 1699=00 |

- ಎಸ್.ಸಿ/ಎಸ್.ಟಿ ಮತ್ತು ಅಂಧ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ರೂ.10=00 ಮಾತ್ರ. (ಫಲಿತಾಂಶ ತಿಳಿಸುವ ಶುಲ್ಕ ರೂ.20=00 ಮತ್ತು ಅಂಕಪಟ್ಟಿ ಲ್ಯಾಮಿನೇಷನ್ ಶುಲ್ಕ ರೂ.25=00 ಒಟ್ಟು ರೂ.55=00 ಪಾವತಿಸಬೇಕಾಗಿರುತ್ತದೆ.)

**ಅನುತ್ತೀರ್ಣರಾದ ಅಭ್ಯರ್ಥಿಗಳ ಶುಲ್ಕದ ವಿವರ**

| ಕ್ರ. ಸಂ | ಪರೀಕ್ಷೆಯ ಹೆಸರು | ಥಿಯರಿ-1 | ಥಿಯರಿ-2 | ಶ್ರವಣ/ದೃಶ್ಯ ಜ್ಞಾನ | ಎಲ್ಲಾ ಪ್ರಾಯೋಗಿಕ ವಿಷಯಗಳು ಸೇರಿದಂತೆ |
|---|---|---|---|---|---|
| 1 | ಕಿರಿಯ ದರ್ಜೆ (Junior ) | 300=00 | - | 244=00 | 720=00 |
| 2 | ಹಿರಿಯ ದರ್ಜೆ (Senior) | 320=00 | 320=00 | - | 780=00 |
| 3 | ವಿದ್ವತ್ ಪೂರ್ವ (Pre Vidwat) | 368=00 | 368=00 | - | 840=00 |
| 4 | ವಿದ್ವತ್ ದರ್ಜೆ ಅಂತಿಮ (Vidwat Final) | 377=00 | 377=00 | - | 900=00 |

ಅಭ್ಯರ್ಥಿಗಳು ಅನುತ್ತೀರ್ಣರಾದ ಪತ್ರಿಕೆಗಳ ಪರೀಕ್ಷಾ ಶುಲ್ಕದ ಒಟ್ಟು ಮೊತ್ತವನ್ನು ಪಾವತಿಸಬೇಕು.

- ಸಂಗೀತ ಶಾಲಾ ಶಿಕ್ಷಕರು/ಸಾಮಾನ್ಯ, ಖಾಸಗಿ ಅಭ್ಯರ್ಥಿಗಳು ಅರ್ಜಿ ಸಲ್ಲಿಕೆ ಶುಲ್ಕ ರೂ.100.00ನ್ನು ನಗದು ರೂಪದಲ್ಲಿ ಪರೀಕ್ಷಾ ಕೇಂದ್ರದಲ್ಲಿ ಪಾವತಿಸುವುದು ಎಲ್ಲರಿಗೂ ಕಡ್ಡಾಯವಾಗಿರುತ್ತದೆ.

- ಎಸ್.ಸಿ/ಎಸ್.ಟಿ ಮತ್ತು ಅಂಧ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ರೂ.10=00 ಮಾತ್ರ. (ಫಲಿತಾಂಶ ತಿಳಿಸುವ ಶುಲ್ಕ ರೂ.20=00 ಮತ್ತು ಅಂಕಪಟ್ಟಿ ಲ್ಯಾಮಿನೇಷನ್ ಶುಲ್ಕ ರೂ.25=00 ಒಟ್ಟು ರೂ.55=00 ಪಾವತಿಸಬೇಕಾಗಿರುತ್ತದೆ.)

- ಅನುತ್ತೀರ್ಣರಾದ ಅಭ್ಯರ್ಥಿಗಳಿಗೆ ಎಮ್.ಎಸ್.ಎ ಯನ್ನು ಕಳುಹಿಸಲಾಗಿದ್ದು, ಇದರಲ್ಲಿ ವಿವರವನ್ನು ಭರ್ತಿ ಮಾಡಿ, ಶುಲ್ಕ ಪಾವತಿಸಿದ ಮೂಲ ಚಲನ್‌ನೊಂದಿಗೆ ಸಲ್ಲಿಸಲು ತಿಳಿಸಿದೆ.

6. ಪರೀಕ್ಷಾ ಕೇಂದ್ರದವರು ಕೇಂದ್ರಕ್ಕೆ ಪರೀಕ್ಷೆ ಕಟ್ಟಲು ಬರುವ ಅಭ್ಯರ್ಥಿಗಳಿಂದ ಹಾಗೂ ಸಂಗೀತ ಶಿಕ್ಷಕರುಗಳಿಂದ ಒಂದು ಅರ್ಜಿಗೆ 100=00ಗಳಂತೆ ನಗದಾಗಿ ಪಡೆದುಕೊಳ್ಳುವುದು. ಅರ್ಜಿಶುಲ್ಕ 100=00 ರೂ ಗಳಲ್ಲಿ 50=00 ರೂ ಅಂಚೆ ವೆಚ್ಚ ಮತ್ತು ಸಂಗೀತ ಪರೀಕ್ಷಾ ಕಾರ್ಯನಿರ್ವಹಿಸುವ ಸಿಬ್ಬಂದಿಯ ಸಂಭಾವನೆಗೆ ಮತ್ತು ಇತ್ಯಾದಿ ಪರೀಕ್ಷಾ ಕಾರ್ಯಗಳಿಗೆ (ಪರೀಕ್ಷಾ ಕಾರ್ಯ ಪ್ರಾರಂಭದಿಂದ ಮುಕ್ತಾಯಗೊಳ್ಳುವವರೆಗೆ) ಉಪಯೋಗಿಸುವುದು. ಈ ಬಗ್ಗೆ ದಾಖಲೆ ಕಾಯ್ದಿರಿಸುವುದು ಹಾಗೂ ಈ ದಾಖಲೆಗಳ ಪ್ರತಿಯನ್ನು ಮಂಡಳಿಗೆ ಸಲ್ಲಿಸುವುದು. ಬಾಕಿ 50=00ರೂ.ಗಳನ್ನು ಪರೀಕ್ಷಾ ಕೇಂದ್ರದಲ್ಲಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಸಂಖ್ಯೆಗನುಗುಣವಾಗಿ ಹಣವನ್ನು ಮಂಡಳಿಯಿಂದ ಕಳುಹಿಸಿರುವ **ಇತರೆ ಪರೀಕ್ಷೆಗಳ ಶುಲ್ಕ ಪಾವತಿಸುವ ನೆಫ್ಟ್ ಚಲನ್ ಮೂಲಕ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಾವತಿಸಿ ಮೂಲ ಪ್ರತಿಯನ್ನು ಮಂಡಳಿಗೆ ಕಳುಹಿಸುವುದು.** ಒಮ್ಮೆ ಪಾವತಿಸಿದ ಹಣವನ್ನು ಯಾವುದೇ ಕಾರಣಕ್ಕೂ ಮರುಪಾವತಿ ಮಾಡುವುದಿಲ್ಲ.

7. ಸಂಗೀತ ಶಾಲೆ/ಅಭ್ಯರ್ಥಿಗಳಿಂದ ಬಂದ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಿದ ನಂತರ ಕಂಪ್ಯೂಟರ್‌ನಲ್ಲಿ ವಿವಿಧ ನಮೂನೆಯ ಮಾಹಿತಿಗಳನ್ನು ಮುದ್ರಿಸಿಕೊಂಡು ಮಂಡಳಿಗೆ ಈ ಕೆಳಕಂಡಂತೆ ದಾಖಲೆಗಳನ್ನು ತಪ್ಪದೇ ಕಳುಹಿಸುವುದು.

   1. ವಿಷಯವಾರು ನಾಮಾಂಕಿತ ಪಟ್ಟಿ.
   2. ವಿಷಯವಾರು, ದರ್ಜೆವಾರು ಮತ್ತು ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಪಾವತಿಸಿದ ಶುಲ್ಕದ ವಿವರದ ನಮೂನೆ.
   3. ಹಾಡುಗಾರಿಕೆ ಮತ್ತು ವಾದ್ಯ ಸಂಗೀತ ಎರಡೂ ಪರೀಕ್ಷೆಗಳನ್ನು ತೆಗೆದುಕೊಂಡ ವಿದ್ಯಾರ್ಥಿಗಳ ವಿವರ ಪಟ್ಟಿ.
   4. ಮೂಲ ಚಲನ್‌ಗಳು
   5. ಎಂ.ಎಸ್.ಎ. ಗಳು ಹಾಗೂ ಇತರೆ ಮಾಹಿತಿ

8. ಪಠ್ಯ ಕ್ರಮದಂತೆ ಒಂದು ವರ್ಷದಲ್ಲಿ ಅಭ್ಯರ್ಥಿಯು ಒಂದು ವಿಷಯದಲ್ಲಿ ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುತ್ತದೆ.

9. **ಪಠ್ಯಕ್ರಮದಂತೆ ಅಭ್ಯರ್ಥಿಗಳು ಯಾವುದೇ ಒಂದು ದರ್ಜೆಯ (ಗ್ರೇಡ್) ಹಾಡುಗಾರಿಕೆ ಮತ್ತು ವಾದ್ಯ ಸಂಗೀತ ಪರೀಕ್ಷೆಗಳಿಗೆ ಒಂದು ಬಾರಿಗೆ ಕುಳಿತುಕೊಳ್ಳಬಹುದು. ಆದರೆ ಈ ಎರಡು ಭಾಗಕ್ಕೆ ಬೇರೆ ಬೇರೆ ಅರ್ಜಿಯನ್ನು ಪರೀಕ್ಷಾ ಶುಲ್ಕದೊಡನೆ ಕಟ್ಟಿರಬೇಕು. ಯಾವ ಕಾರಣದಿಂದಲೂ ಒಬ್ಬ ಅಭ್ಯರ್ಥಿಯು ಬೇರೆ ಬೇರೆ ದರ್ಜೆಯ (ಗ್ರೇಡ್) ಹಾಡುಗಾರಿಕೆ ಹಾಗೂ ವಾದ್ಯ ಸಂಗೀತ ಪರೀಕ್ಷೆಗಳಿಗೆ ಒಂದೇ ವರ್ಷದಲ್ಲಿ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ. ಅಂತೆಯೇ ಹಾಡುಗಾರಿಕೆ ಅಥವಾ ವಾದ್ಯ ಸಂಗೀತದ ಪರೀಕ್ಷೆಯೊಂದಿಗೆ ತಾಳವಾದ್ಯ ಮತ್ತು ನೃತ್ಯದ ಪರೀಕ್ಷೆಗಳಿಗೆ ಜೊತೆಯಲ್ಲಿಯೇ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ.**

ಅಭ್ಯರ್ಥಿ ಎರಡು ವಿಷಯಗಳಿಗೆ ಹಾಜರಾಗುತ್ತಿದ್ದಲ್ಲಿ ಅಂತಹವರ ಪೂರ್ಣ ವಿವರವನ್ನು ಸಂಸ್ಥೆಯವರು ಹಾಗೂ ಖಾಸಗಿ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದವರಿಗೆ ನೀಡುವುದು. ಪರೀಕ್ಷಾ ಕೇಂದ್ರದವರು ಇಂತಹ ಎಲ್ಲಾ ಹೆಸರುಗಳನ್ನು ಒಂದು ಪುಸ್ತಕದಲ್ಲಿ ದಾಖಲಿಸಿಕೊಂಡು ಅರ್ಜಿ ಸಲ್ಲಿಸುವಾಗ ಅಥವಾ ಪರೀಕ್ಷೆ ಮುಗಿದ ನಂತರ ನೋಂದಣಿ ಸಂಖ್ಯೆಯೊಂದಿಗೆ ಮಾಹಿತಿಯನ್ನು ಕಡ್ಡಾಯವಾಗಿ ಮಂಡಳಿಗೆ ಕಳುಹಿಸುವುದು.

10. ವಿವಿಧ ಪರೀಕ್ಷೆಗಳಿಗೆ ಕೆಳಕಂಡ ವಾದ್ಯಗಳನ್ನು ಮಾತ್ರ ನಿಗದಿಪಡಿಸಿದೆ.

| | |
|---|---|
| ಅ) ಕರ್ನಾಟಕ ವಾದ್ಯ ಸಂಗೀತ | ವೀಣೆ/ಪಿಟೀಲು/ಕೊಳಲು/ನಾದಸ್ವರ/ಗೋಟುವಾದ್ಯ/ ಕ್ಲಾರಿಯೋನೆಟ್/ಮ್ಯಾಂಡಲಿನ್/ಸ್ಯಾಕ್ಸಫೋನ್ |
| ಆ) ಹಿಂದೂಸ್ತಾನಿ ವಾದ್ಯ ಸಂಗೀತ | ಪಿಟೀಲು/ಕೊಳಲು/ಬೀನ್/ಸಿತಾರ್/ಷಹನಾಯ್/ದಿಲ್‌ರುಬಾ/ಹಾರ್ಮೋನಿಯಂ/ ಮೋಹನ್ ವೀಣಾ/ರುದ್ರವೀಣಾ/ಸಂತೂರ್/ಸರೋದ್/ಸಾರಂಗಿ |
| ಇ) ಕರ್ನಾಟಕ ತಾಳವಾದ್ಯ | ಮೃದಂಗ/ಖಂಜಿರ/ಘಟಂ/ಮೋರ್ಚಿಂಗ್/ಡೋಲ್/ ಡೋಲಕ್ |
| ಈ) ಹಿಂದೂಸ್ತಾನಿ ತಾಳವಾದ್ಯ | ತಬಲ/ಪಕ್ವಾಜ್/ಡೋಲಕ್ |

**ಪರೀಕ್ಷಾ ಅರ್ಜಿಗಳನ್ನು ಸ್ವೀಕರಿಸುವ ಮುನ್ನ ಕೆಳಕಂಡ ಅಂಶಗಳನ್ನು ಗಮನಿಸತಕ್ಕದ್ದು.**

11 (ಅ). ಪಠ್ಯಕ್ರಮದಂತೆ ಕಿರಿಯ ದರ್ಜೆ ಪರಿಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ದಿನಾಂಕ 01-03-2019ಕ್ಕೆ 10 ವರ್ಷ ತುಂಬಿರಬೇಕು. ಶಾಲಾ ಮುಖ್ಯಸ್ಥರಿಂದ ಪಡೆದ ಮೂಲ ದಾಖಲೆ ಪತ್ರ/ ವರ್ಗಾವಣೆ ಪತ್ರದ ದೃಢೀಕರಿಸಿದ ಜೆರಾಕ್ಸ್ ಪ್ರತಿ/ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪ್ರಮಾಣ ಪತ್ರದ ದೃಢೀಕರಿಸಿದ ಜೆರಾಕ್ಸ್ ಪ್ರತಿಯನ್ನು ಅರ್ಜಿಯ ಜೊತೆ ಕಡ್ಡಾಯವಾಗಿ ಲಗತ್ತಿಸಲು ತಿಳಿಸಿದೆ. ಕನಿಷ್ಠ ಕನ್ನಡ ನಾಲ್ಕನೇ ತರಗತಿಯಲ್ಲಿ ತೇರ್ಗಡೆ ಹೊಂದಿರಬೇಕು ಮತ್ತು ಕಡ್ಡಾಯವಾಗಿ 10 ವರ್ಷ ತುಂಬಿರಲೇಬೇಕು. <u>ಪರೀಕ್ಷಾ ಕೇಂದ್ರದವರು ಜನ್ಮ ದಿನಾಂಕದ ಬಗ್ಗೆ ತಮ್ಮ ಹಂತದಲ್ಲೇ ಪರಿಶೀಲಿಸಿ ಕಡಿಮೆ ವಯಸ್ಸಿನ ವಿದ್ಯಾರ್ಥಿಗಳ ಅರ್ಜಿ ಸಲ್ಲಿಸುವ ಮನವಿಗಳನ್ನು ತಿರಸ್ಕರಿಸುವುದು. ಹಿಂದಿನ ವರ್ಷಗಳಲ್ಲಿ ಇದೇ ಕಾರಣಕ್ಕೆ ಹಲವಾರು ಅರ್ಜಿಗಳು ತಿರಸ್ಕೃತಗೊಂಡಿವೆ. ಪರೀಕ್ಷಾಕೇಂದ್ರದವರು ಈ ಬಗ್ಗೆ ಎಚ್ಚರವಹಿಸುವುದು.</u>

11 (ಆ). ಪಠ್ಯಕ್ರಮದಂತೆ ಹಿರಿಯ ದರ್ಜೆಗೆ ಅರ್ಜಿ ಸಲ್ಲಿಸಲು, ಕಿರಿಯ ದರ್ಜೆಯಲ್ಲಿ <u>**ಉತ್ತೀರ್ಣರಾಗಿ 3 ವರ್ಷ ಆಗಿರಬೇಕು.**</u> ಅಥವಾ 01.03.2019ಕ್ಕೆ ಸರಿಯಾಗಿ 17ವರ್ಷ ತುಂಬಿದ್ದು, ಅಭ್ಯರ್ಥಿಯು ಸಂಗೀತ/ನೃತ್ಯ/ತಾಳವಾದ್ಯ ವಿಷಯಗಳನ್ನು ಐಚ್ಛಿಕವಾಗಿ ವ್ಯಾಸಂಗ ಮಾಡಿ (ಪಿ.ಯು.ಸಿ) ಪದವಿ ಪೂರ್ವ ಶಿಕ್ಷಣ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರೆ ನೇರವಾಗಿ ಹಿರಿಯ ದರ್ಜೆಗೆ ಕೂಡಲು ಅವಕಾಶವಿದೆ ಅಥವಾ ಸರ್ಕಾರದ ಆದೇಶ ಸಂಖ್ಯೆ ಇಡಿ–195–ಡಿಜಿಒ–2004 ಬೆಂಗಳೂರು, ದಿನಾಂಕ: 15.01.2005ರಂತೆ 01.03.2019 ಕ್ಕೆ 18 ವರ್ಷ ಪೂರ್ಣಗೊಂಡ ಅಭ್ಯರ್ಥಿಗಳು ನೇರವಾಗಿ ಹಿರಿಯ ದರ್ಜೆ ಸಂಗೀತ/ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆ ತೆಗೆದುಕೊಳ್ಳಬಹುದು. ಸದರಿ ಅಭ್ಯರ್ಥಿಗಳು ಪಾಠ ಮಾಡಿರುವ ಗುರುಗಳಿಂದ ಪರೀಕ್ಷೆಗೆ ನಿಗದಿಪಡಿಸಿದ ಪಠ್ಯ ವಸ್ತುವಿನ ಪಾಠ ಆಗಿರುವ ಬಗ್ಗೆ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಅರ್ಜಿ ಮನವಿಯೊಂದಿಗೆ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ನೀಡುವುದು. **(2015 ಮತ್ತು 2015 ಕ್ಕಿಂತ ಹಿಂದಿನ ವರ್ಷಗಳಲ್ಲಿ ಕಿರಿಯ ದರ್ಜೆಯಲ್ಲಿ ಪಾಸಾದ ವಿದ್ಯಾರ್ಥಿಗಳು ಹಿರಿಯ ದರ್ಜೆಗೆ ಅರ್ಜಿ ಸಲ್ಲಿಸಲು ಅರ್ಹರು. 2016 ರಲ್ಲಿ ಪರೀಕ್ಷೆ ನಡೆದಿರುವುದಿಲ್ಲ).**

11 (ಇ). ವಿದ್ವತ್ ಪೂರ್ವ ದರ್ಜೆಗೆ ಅರ್ಜಿ ಸಲ್ಲಿಸಲು **ಹಿರಿಯ ದರ್ಜೆಯಲ್ಲಿ ಉತ್ತೀರ್ಣರಾಗಿ 3 ವರ್ಷಗಳಾಗಿರಬೇಕು** ಅಥವಾ ದಿನಾಂಕ: 01.03.2019ಕ್ಕೆ 19 ವರ್ಷ ಪೂರ್ಣಗೊಂಡಿರುವ ಅಭ್ಯರ್ಥಿಯು ಸಂಗೀತ/ನೃತ್ಯ/ತಾಳವಾದ್ಯ ವಿಷಯಗಳನ್ನು ಐಚ್ಛಿಕವಾಗಿ ತೆಗೆದುಕೊಂಡು ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರೆ ವಿದ್ವತ್ ಪರೀಕ್ಷೆಗೆ ಕೂಡಬಹುದು. **(2015 ಮತ್ತು 2015 ಕ್ಕಿಂತ ಹಿಂದಿನ ವರ್ಷಗಳಲ್ಲಿ ಹಿರಿಯ ದರ್ಜೆಯಲ್ಲಿ ಪಾಸಾದ ವಿದ್ಯಾರ್ಥಿಗಳು ವಿದ್ವತ್ ಪೂರ್ವ ದರ್ಜೆಗೆ ಅರ್ಜಿ ಸಲ್ಲಿಸಲು ಅರ್ಹರು. 2016 ರಲ್ಲಿ ಪರೀಕ್ಷೆ ನಡೆದಿರುವುದಿಲ್ಲ).**

11 (ಈ). ವಿದ್ವತ್ ಪೂರ್ವ ಪರೀಕ್ಷೆ ಉತ್ತೀರ್ಣರಾದ ಒಂದು ವರ್ಷದ ನಂತರ ವಿದ್ವತ್ ಅಂತಿಮ ಪರೀಕ್ಷೆಗೆ ಕೂಡಬಹುದು.

<u>ಅಭ್ಯರ್ಥಿಗಳು ಹಿರಿಯ ಮತ್ತು ವಿದ್ವತ್ ಪೂರ್ವ ಹಾಗೂ ವಿದ್ವತ್ ಅಂತಿಮ ದರ್ಜೆ ಪರೀಕ್ಷೆ ತೆಗೆದುಕೊಳ್ಳುವಾಗ ಮಾದರಿ ಅರ್ಜಿಯ ಜೊತೆಯಲ್ಲಿ ಹಿಂದಿನ ಪರೀಕ್ಷೆಯ ಅಂದರೆ ಕಿರಿಯ ಮತ್ತು ಹಿರಿಯ ದರ್ಜೆಯ ಹಾಗೂ ವಿದ್ವತ್ ಪೂರ್ವ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಂಕಪಟ್ಟಿಯ ದೃಢೀಕೃತ ಛಾಯಾ ಪ್ರತಿಗಳನ್ನು ಇತರೆ ದಾಖಲೆಗಳೊಂದಿಗೆ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ಸಲ್ಲಿಸುವುದು.</u>

<u>ಸೀನಿಯರ್, ವಿದ್ವತ್‌ಪೂರ್ವ, ವಿದ್ವತ್ ಅಂತಿಮ ಪರೀಕ್ಷೆಗಳ ಮಾದರಿ ಅರ್ಜಿಯೊಂದಿಗೆ ಹಿಂದಿನ ಪರೀಕ್ಷೆಯ ಅಂಕಪಟ್ಟಿಗಳಲ್ಲಿ ಉತ್ತೀರ್ಣರಾದ ವರ್ಷವನ್ನು ಪರಿಶೀಲಿಸಿ ನಿಯಮಾನುಸಾರ ಅಭ್ಯರ್ಥಿಗಳು 2019ರ ಪರೀಕ್ಷೆ ಬರೆಯಲು ಅರ್ಹರೇ ಎಂದು ಪರಿಶೀಲಿಸಿದ ನಂತರವೇ ಪರೀಕ್ಷಾ ಕೇಂದ್ರದವರು ಸ್ವೀಕರಿಸಲು ತಿಳಿಸಿದೆ. ಇಲ್ಲದಿದ್ದಲ್ಲಿ ತಮ್ಮ ಹಂತದಲ್ಲಿಯೇ ಅರ್ಜಿಗಳನ್ನು ತಿರಸ್ಕರಿಸುವುದು.</u>

11. (ಉ) ಎಲ್ಲಾ ಅಭ್ಯರ್ಥಿಗಳು ತಮ್ಮ ವಾಸಸ್ಥಳಕ್ಕೆ ಅತ್ಯಂತ ಹತ್ತಿರದಲ್ಲಿರುವ ಪರೀಕ್ಷಾ ಕೇಂದ್ರಗಳಲ್ಲಿಯೇ ಪರೀಕ್ಷೆ ತೆಗೆದುಕೊಳ್ಳುವುದು. ವಾಸಸ್ಥಳದ ಬಗ್ಗೆ ಗುರುತಿನ ಚೀಟಿ /ಆಧಾರ್ ಕಾರ್ಡ್/ ರೇಷನ್ ಕಾರ್ಡ್/ಚುನಾವಣಾ ಗುರುತಿನ ಪತ್ರ/ಶಾಲಾ ವ್ಯಾಸಂಗ ಪ್ರಮಾಣ ಪತ್ರ ಇವುಗಳಲ್ಲಿ ಯಾವುದಾದರೂ ಒಂದು ಮಾಹಿತಿಯನ್ನು ಸ್ಥಳೀಯರೆಂದು ದೃಢಪಡಿಸಲು ನೀಡುವುದು. **(ತಮ್ಮ ಜಿಲ್ಲೆಯಲ್ಲಿಯೇ ಪರೀಕ್ಷೆಗೆ ಹಾಜರಾಗತಕ್ಕದ್ದು. ಬೇರೆ ಜಿಲ್ಲೆಯಲ್ಲಿ ಅರ್ಜಿಯನ್ನು ಸಲ್ಲಿಸಿದಲ್ಲಿ ಅರ್ಜಿಯನ್ನು ಯಾವ ಮುನ್ಸೂಚನೆ ನೀಡದೆ ತಿರಸ್ಕರಿಸಲಾಗುವುದು.)** ತೆಗೆದುಕೊಳ್ಳಬೇಕಾದ ಪರೀಕ್ಷಾ ವಿಷಯಗಳ ಪರೀಕ್ಷೆಗೆ ಆ ಜಿಲ್ಲೆಯಲ್ಲಿ ಕೇಂದ್ರಗಳಿಲ್ಲದಿದ್ದರೆ ಮಾತ್ರ ಹತ್ತಿರದಲ್ಲಿಯ ಪರೀಕ್ಷಾ ಕೇಂದ್ರಗಳಲ್ಲಿ (ಆ ವಿಷಯದ ಪರೀಕ್ಷೆ ಇರುವ) ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಲಾಗುವುದು.

12. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದ ವಿನಾಯಿತಿ ಇದೆ. ಪರೀಕ್ಷಾ ಶುಲ್ಕದಿಂದ ವಿನಾಯಿತಿ ಪಡೆಯಲು ಈ ವರ್ಗದ ಅಭ್ಯರ್ಥಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದ ಮೂಲ ಜಾತಿ ಪ್ರಮಾಣ ಮತ್ತು ಸದರಿ

ಪ್ರಮಾಣ ಪತ್ರವನ್ನು ದೃಢೀಕರಿಸಿ ಮಾದರಿ ಅರ್ಜಿಯೊಂದಿಗೆ ಲಗತ್ತಿಸಿ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ನೀಡಬೇಕು. ದೃಢೀಕೃತ ಪತ್ರವನ್ನು ಕೇಂದ್ರದಲ್ಲಿ ಇಟ್ಟುಕೊಂಡು ಮೂಲ ಪ್ರಮಾಣ ಪತ್ರವನ್ನು ವಿದ್ಯಾರ್ಥಿಗೆ ಹಿಂದಿರುಗಿಸುವುದು. ಹಾಗೆಯೇ ಅಂಥ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ನೀಡಲಾಗುತ್ತದೆ. ಇಂತಹ ವಿದ್ಯಾರ್ಥಿಗಳು ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ಮೂಲ ಪ್ರಮಾಣ ಪತ್ರವನ್ನು ದೃಢೀಕರಿಸಿ ಮಾದರಿ ಅರ್ಜಿಯೊಂದಿಗೆ ಲಗತ್ತಿಸಿ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ನೀಡಬೇಕು. ದೃಢೀಕೃತ ಪತ್ರವನ್ನು ಕೇಂದ್ರದಲ್ಲಿ ಇಟ್ಟುಕೊಂಡು ಮೂಲ ಪ್ರಮಾಣ ಪತ್ರವನ್ನು ವಿದ್ಯಾರ್ಥಿಗೆ ಹಿಂದಿರುಗಿಸುವುದು. ಇಲ್ಲವಾದಲ್ಲಿ ಅಂತಹ ಅರ್ಜಿಗಳನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರು ತಮ್ಮ ಹಂತದಲ್ಲೇ ತಿರಸ್ಕರಿಸುವುದು.

13. ಸಂಗೀತ ಶಾಲಾ ಶಿಕ್ಷಕರ ಮುಖಾಂತರ ಹಾಗೂ ಖಾಸಗಿಯಾಗಿ/ನೇರವಾಗಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದಲ್ಲಿ ಅರ್ಜಿಯನ್ನು ಸಲ್ಲಿಸುವಾಗ ಈ ಕೆಳಕಂಡ ಸೂಚನೆಗಳನ್ನು ತಪ್ಪದೆ ಎಚ್ಚರವಹಿಸಿ ಪಾಲಿಸತಕ್ಕದ್ದು.

ಅ) ಅರ್ಜಿ ಸಲ್ಲಿಸಲಿಚ್ಚಿಸುವ ಜಿಲ್ಲೆಯಲ್ಲಿರುವ ಪರೀಕ್ಷಾ ಕೇಂದ್ರಗಳಲ್ಲಿ ನಡೆಯದೇ ಇರುವ ವಿಷಯಗಳಿಗೆ ಪ್ರಸ್ತುತ ನಿಗಧಿಪಡಿಸಿರುವ ಯಾವುದಾದರೂ ಹತ್ತಿರದ ಪರೀಕ್ಷಾ ಕೇಂದ್ರದ ಮೂಲಕ ಅರ್ಜಿ ಸಲ್ಲಿಸಬೇಕು. ಸ್ಥಳೀಯ ಅಭ್ಯರ್ಥಿ ಎಂಬ ಬಗ್ಗೆ ಖಾತ್ರಿಯಾಗಲು ಕಂಡಿಕೆ 11 (ಈ) ರಲ್ಲಿ ತಿಳಿಸಿರುವಂತೆ ದೃಢೀಕೃತ ಗುರುತಿನ ಚೀಟಿ ಪಡೆದು ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ಸಲ್ಲಿಸಬೇಕು.

14. ಅಭ್ಯರ್ಥಿಯ ಇತ್ತೀಚಿನ ಅಂದರೆ ಮೂರು ತಿಂಗಳ ಒಳಗೆ ತೆಗೆಸಿದ ಎರಡು ಭಾವಚಿತ್ರಗಳನ್ನು ಮಾದರಿ ಅರ್ಜಿಯೊಂದಿಗೆ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ನೀಡುವುದು. ಅಭ್ಯರ್ಥಿಗಳ ಭಾವಚಿತ್ರವು ಸ್ಕ್ಯಾನಿಂಗ್ ಆಗುವುದರಿಂದ ಭಾವಚಿತ್ರದ ಹಿಂಪರದೆಯು ಮತ್ತು ಧರಿಸುವ ಉಡುಪು ಸಾದಾ ಬಣ್ಣ ಇರುವಂತೆ ಗಮನವಹಿಸುವುದು. ಪರೀಕ್ಷಾ ಕೇಂದ್ರದವರು ಸಂಸ್ಥೆ/ಶಾಲೆ/ವಿದ್ಯಾರ್ಥಿಗಳು ನೀಡಿದ ಎರಡು ಭಾವಚಿತ್ರಗಳನ್ನು ಕೇಂದ್ರದಲ್ಲೇ ಉಳಿಸಿಕೊಳ್ಳುವುದು. ಅದರಲ್ಲಿ ಒಂದು ಭಾವಚಿತ್ರವನ್ನು ಎ4 ಸೈಜ್ ಹಾಳೆಯ ಮೇಲೆ ಅಂಟಿಸಿ ಅಭ್ಯರ್ಥಿಯ ವಿವರ ಬರೆದು ಪುಸ್ತಕದಂತೆ ಸಿದ್ಧಪಡಿಸಿ ಕೇಂದ್ರದಲ್ಲಿ ಕಾಯ್ದಿರಿಸಿಕೊಳ್ಳುವುದು. ಇನ್ನೊಂದು ಭಾವಚಿತ್ರವನ್ನು ಪರೀಕ್ಷಾ ಕಾರ್ಯದ ಅಗತ್ಯಕ್ಕೆ ಅನುಗುಣವಾಗಿ ಬಳಸಿಕೊಳ್ಳುವುದು.

15. ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಖಾಸಗಿ ಅಭ್ಯರ್ಥಿಗಳಿಂದ ಮತ್ತು ನೋಂದಾಯಿತ ಸಂಗೀತ ಶಾಲಾ ಶಿಕ್ಷಕರುಗಳಿಂದ ಕಳುಹಿಸಿದ ಅಭ್ಯರ್ಥಿಗಳ ಸಂಪೂರ್ಣ ವಿವರ ಅಂದರೆ, ಅಭ್ಯರ್ಥಿಯ ಹೆಸರು/ತಂದೆಯ ಹೆಸರು/ಜನ್ಮ ದಿನಾಂಕ/ಪೂರ್ಣ ಅಂಚೆ ವಿಳಾಸ, ತೆಗೆದುಕೊಂಡಿರುವ ಪರೀಕ್ಷೆ ಮತ್ತು ದೂರವಾಣಿ ಸಂಖ್ಯೆ ಎಲ್ಲಾ ವಿವರಗಳನ್ನು ಒಂದು ದೊಡ್ಡ ನೊಂದಣಿ ಪುಸ್ತಕದಲ್ಲಿ ತಪ್ಪದೆ ನಮೂದಿಸಿಕೊಳ್ಳುವುದು.

16. ಹೊಸ ಪಠ್ಯ ಕ್ರಮದಲ್ಲಿ ಮೊದಲು ಪ್ರಾಯೋಗಿಕ ಪರೀಕ್ಷೆ ಪಾಸು ಮಾಡಿ ನಂತರದ ವರ್ಷದಲ್ಲಿ ಶಾಸ್ತ್ರ ಪರೀಕ್ಷೆಗೆ ಕುಳಿತು ಪಾಸು ಮಾಡಲು ಅವಕಾಶವಿರುವುದಿಲ್ಲ. ಅಂತಹ ಅರ್ಜಿಗಳನ್ನು ಪರೀಕ್ಷಾ ಕೇಂದ್ರದ ಹಂತದಲ್ಲಿಯೇ ತಿರಸ್ಕರಿಸಲು ತಿಳಿಸಿದೆ.

17. ಅಭ್ಯರ್ಥಿಗಳ ಪ್ರವೇಶ ಪತ್ರದಲ್ಲಿ ಮಂಡಳಿಯಿಂದ ನಿಗಧಿಪಡಿಸುವ ಪರೀಕ್ಷಾ ಕೇಂದ್ರದ ವಿಳಾಸದಲ್ಲಿಯೇ ಅಭ್ಯರ್ಥಿಗಳು ಶಾಸ್ತ್ರ ಪರೀಕ್ಷೆಗೆ ಹಾಗೂ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗತಕ್ಕದ್ದು.

18. ಅರ್ಜಿ ಸಲ್ಲಿಸಿದ ನಂತರ ವಿಷಯ ಸಂಕೇತದ ಬದಲಾವಣೆಗೆ ಅರ್ಜಿ ಸಲ್ಲಿಸಿದಲ್ಲಿ ತಪ್ಪಿಗೆ **ರೂ.500.00** ದಂಡ ವಿಧಿಸಲಾಗುವುದು. ಮಂಡಳಿಯ ಗಮನಕ್ಕೆ ತರದೇ ಪರೀಕ್ಷಾ ಕೇಂದ್ರದಲ್ಲೇ ಬದಲಾವಣೆ ಮಾಡಿಕೊಂಡು ಪರೀಕ್ಷೆ ಮುಗಿಸಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಪರೀಕ್ಷಾ ಕೇಂದ್ರದವರೇ ಜವಾಬ್ದಾರರು.

19. ಅರ್ಜಿಯಲ್ಲಿ ವಿದ್ಯಾರ್ಥಿ/ತಂದೆ/ಇನ್ನಾವುದೇ ವಿವರವನ್ನು ತಪ್ಪಾಗಿ ವಿವರ ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ, ಸರಿಪಡಿಸಲು ಪ್ರತಿ ತಪ್ಪಿಗೆ **ರೂ.100=00** ದಂಡ ವಿಧಿಸಲಾಗುವುದು. ಸಂಸ್ಥೆ/ಶಾಲೆ/ವಿದ್ಯಾರ್ಥಿಗಳು ಸಂಬಂಧಿಸಿದ ಪೂರಕ ದಾಖಲೆಗಳೊಂದಿಗೆ ಮಾದರಿ ಅರ್ಜಿಯೊಂದಿಗೆ ವಿವರವನ್ನು ಪರೀಕ್ಷಾ ಕೇಂದ್ರಕ್ಕೆ ಸಲ್ಲಿಸುವುದು.

ಮೇಲಿನ ಎಲ್ಲಾ ನಿಯಮಗಳನ್ನು ಸಂಬಂಧಪಟ್ಟ ಸಂಗೀತ ಶಿಕ್ಷಕರು/ಖಾಸಗಿ ಅಭ್ಯರ್ಥಿಗಳು ತಪ್ಪದೇ ಪಾಲಿಸಲು ತಿಳಿಸಿದೆ. ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂದಿನ ತೊಂದರೆಗಳಿಗೆ ಅಭ್ಯರ್ಥಿಗಳು ಮತ್ತು ಶಿಕ್ಷಕರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

20. ಖಾಸಗಿ ಅಭ್ಯರ್ಥಿಗಳು ಹಾಗೂ ತಮ್ಮ ಮೂಲಕ ಸಂಗೀತ ಪರೀಕ್ಷೆಗೆ ವಿದ್ಯಾರ್ಥಿಗಳ ಅರ್ಜಿ ಸಲ್ಲಿಸುವ ಶಿಕ್ಷಕರು ಪರೀಕ್ಷಾ ಕೇಂದ್ರದಿಂದ ಪಡೆದ ಸ್ವೀಕೃತಗೊಂಡ ಅರ್ಜಿ ಮತ್ತು ಬ್ಯಾಂಕ್ ಚಲನ್‌ನ ಜೆರಾಕ್ಸ್ ಪ್ರತಿಗಳನ್ನು ಇಟ್ಟುಕೊಳ್ಳುವುದು.

21. ಶಾಸ್ತ್ರ ಹಾಗೂ ಪ್ರಾಯೋಗಿಕ ಪರೀಕ್ಷಾ ಸಮಯದಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ತಾಳ್ಮೆಯಿಂದಿದ್ದು, ಶಾಂತಿಯುತವಾದ ವಾತಾವರಣವನ್ನು ಕಾಪಾಡಲು ಪೋಷಕರಿಗೆ ತಿಳಿಸುವುದು. ಪರೀಕ್ಷೆಗಳು ಸುಗಮವಾಗಿ ಸಕಾಲಕ್ಕೆ ನಡೆಯಲು ಪರೀಕ್ಷಾ ಕೇಂದ್ರದ ಸಿಬ್ಬಂದಿಗೆ ಸಹಕಾರ ನೀಡುವುದು.

22. **ಅಂಧ ವಿದ್ಯಾರ್ಥಿಗಳಿಗೆ ವಿಶೇಷ ಸೂಚನೆ–** ಸಂಗೀತ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಅಂಧ ಅಭ್ಯರ್ಥಿಗಳು ಪರೀಕ್ಷೆ ಬರೆಯುವ ಸಹಾಯಕರ ಸಂಪೂರ್ಣ ವಿವರವನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರ ಧೃಢೀಕರಣದೊಂದಿಗೆ ಮಂಡಳಿಗೆ ಪರೀಕ್ಷಾ ಅರ್ಜಿ ಸಲ್ಲಿಸಿದ 15 ದಿವಸದೊಳಗೆ ಮಂಡಳಿಗೆ ಕಳುಹಿಸುವುದು. **ಅಂಧ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ಬರೆಯುವ ಸಹಾಯಕರು ಸಂಗೀತ ಜ್ಞಾನವುಳ್ಳವರಾಗಿರಬಾರದು. ಕನಿಷ್ಠ 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಪರೀಕ್ಷಾ ಸಹಾಯಕರಾಗಿ ಪರೀಕ್ಷೆ ಬರೆಯಲು ಒಪ್ಪಿಗೆ ಪತ್ರ ನೀಡಬೇಕು. ಅಲ್ಲದೆ ಸಹಾಯಕರ ಒಂದು ಪಾಸ್‌ಪೋರ್ಟ್ ಸೈಜ್ ಅಳತೆಯ ಭಾವಚಿತ್ರವನ್ನು ಒಪ್ಪಿಗೆಯ ಪತ್ರದೊಡನೆ ಲಗತ್ತಿಸಿ, ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ಪ್ರತಿ ಸಮೇತ ಎಲ್ಲಾ ವಿವರಗಳನ್ನು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರ ಧೃಢೀಕರಣದೊಂದಿಗೆ ಸಲ್ಲಿಸಬೇಕು.** ಈ ಎಲ್ಲ ಮಾಹಿತಿಯ ಒಂದು ಪ್ರತಿಯನ್ನು ಪರೀಕ್ಷಾ ಕೇಂದ್ರದಲ್ಲಿ ಕಾಯ್ದಿರಿಸಿಕೊಳ್ಳುವುದು.

23. ಪರೀಕ್ಷಾ ಕೇಂದ್ರದ ಮುಖ್ಯಸ್ಥರು ವಿದ್ಯಾರ್ಥಿಗಳು ಸಲ್ಲಿಸುವ ಪೂರಕ ದಾಖಲೆಗಳನ್ನು ಪರೀಕ್ಷಾ ಕೇಂದ್ರದಲ್ಲಿಯೇ ಕಾಯ್ದಿರಿಸುವುದು.

24. ಎಲ್ಲಾ ಪರೀಕ್ಷಾ ಕೇಂದ್ರದವರು ನಿಮ್ಮ ಕೇಂದ್ರಕ್ಕೆ ಅಭ್ಯರ್ಥಿಗಳು/ಸಂಗೀತ ಶಿಕ್ಷಕರುಗಳಿಂದ ಬಂದಿರುವ ಎಂ.ಎಸ್.ಎ., ಬ್ಯಾಂಕ್ ಚಲನ್, ಕಂಪ್ಯೂಟರಿನಲ್ಲಿ ಮುದ್ರಿಸಿಕೊಂಡ ವಿವಿಧ ಮಾಹಿತಿಯ ನಮೂನೆ ಇತ್ಯಾದಿಗಳನ್ನು ಈ ಕೆಳಕಂಡ ವಿಳಾಸಕ್ಕೆ ಖುದ್ದಾಗಿ ಅಥವಾ ರಿಜಿಸ್ಟರ್ಡ್ ಅಂಚೆ ಮುಖಾಂತರ ಕಳುಹಿಸುವುದು.

**ಶ್ರೀಮತಿ ಹೇಮಲತಾ ಡಿ. ನಾಯಕ್,**
**ಸಹಾಯಕ ನಿರ್ದೇಶಕರು ಮತ್ತು ಶಾಖಾಧಿಕಾರಿಗಳು,**
**ಸಂಗೀತ ವಿಭಾಗ, 4ನೇ ಮಹಡಿ,**
**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,**
**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.**
**ಮೊಬೈಲ್ ಸಂಖ್ಯೆ: 9686333455**
**ಮಂಡಳಿಯ ದೂರವಾಣಿ ಸಂಖ್ಯೆಗಳು : 080–23360109**
ಇ.ಮೇಲ್ ವಿಳಾಸ:– **dpioekseeb@gmail.com**

25. ವಿಶೇಷ ಸಂಗೀತ ನೃತ್ಯ/ತಾಳವಾದ್ಯ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಸುತ್ತೋಲೆಗಳು, ಜ್ಞಾಪನ, ಫಲಿತಾಂಶ ಇತ್ಯಾದಿ ವಿವರಗಳನ್ನು ಮಂಡಳಿಯ ವೆಬ್‌ಸೈಟ್ **www.kseeb.kar.nic.in** ನಲ್ಲಿ ವೀಕ್ಷಿಸಬಹುದು.

(ಕೆ.ಎಸ್. ಮಣಿ)
ನಿರ್ದೇಶಕರು
(ಇತರೆ ಪರೀಕ್ಷೆಗಳು)

**ಇವರಿಗೆ:**

1) ರಾಜ್ಯದ ಎಲ್ಲಾ ಸಂಗೀತ/ನೃತ್ಯ/ತಾಳವಾದ್ಯ ಪರೀಕ್ಷಾ ಕೇಂದ್ರದ ಮುಖ್ಯಸ್ಥರುಗಳಿಗೆ ಸೂಕ್ತ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ಸಂಗೀತ/ನೃತ್ಯ/ತಾಳವಾದ್ಯ ಶಾಲಾ/ಸಂಸ್ಥೆಗಳ ಮುಖ್ಯಸ್ಥರುಗಳಿಗೆ ಸೂಕ್ತ ಕ್ರಮಕ್ಕಾಗಿ
3) ಹಿರಿಯ ಸಹಾಯಕ ನಿರ್ದೇಶಕರು, ಸಂಗೀತ/ನೃತ್ಯ ವಿಭಾಗ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ
4) ವಿಭಾಗೀಯ ಅಧೀಕ್ಷಕರು, ಮೈಸೂರು/ಬೆಂಗಳೂರು/ಬೆಳಗಾಂ/ಗುಲ್ಬರ್ಗ ವಿಭಾಗ, ಸಹನಿರ್ದೇಶಕರ ಕಛೇರಿ, ಇವರುಗಳಿಗೆ ಮಾಹಿತಿಗಾಗಿ.
5) ಹಿರಿಯ ಸಹಾಯಕ ನಿರ್ದೇಶಕರು, ಗಣಕ ಶಾಖೆ ಇವರಿಗೆ ಅಂತರ್ಜಾಲದಲ್ಲಿ ಪ್ರಕಟಿಸಲು ಮತ್ತು ಮುಂದಿನ ಕ್ರಮಕ್ಕಾಗಿ.
6) ಕಛೇರಿ ಪ್ರತಿ.

**ಪ್ರತಿಯನ್ನು ಗೌರವಪೂರ್ವಕವಾಗಿ:–**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು(ಪ್ರಾಥಮಿಕ ಮತ್ತು ಪ್ರೌಢ), ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಮಾನ್ಯ ಆಯುಕ್ತರು ಹಾಗೂ ಅಧ್ಯಕ್ಷರು, ಕ.ಪ್ರೌ.ಶಿ.ಪ. ಮಂಡಳಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.